ಸಾಕ್ಷಿಯು ದಿನಾಂಕ- **06-03-2026** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು- ಆರೋಪಿ ಪರ ಶ್ರೀ ಸಿ ಎಂ ಎಸ್ ಪಿ ವಕೀಲರಿಂದ</u> -

ದಿಃ **18.01.2024** ರಂದು ಆರೋಪಿಯು ನಮ್ಮ ಸಂಘಕ್ಕೆ ನಿಪಿ-1 ಚೆಕ್ ಕೊಟ್ಟಿದ್ದರು. ನಾವು ಜಬೀವುಲ್ಲಾ ಬೇಗಾಂ, ಮೊಹಮ್ಮದ್ ಶಫೀ ಕಾಗದಕರ್, ಫಕೀರೆಡ್ಡಿ ರವರಿಗೆ ಜಂಟಿಯಾಗಿ ರೂ.**10** ಲಕ್ಷಸಾಲ ಕೊಟ್ಟಿದ್ದೇವು.

ನ್ಯಾಯಾಲಯದ ಪ್ರಶ್ನೆಃಈ ಮೇಲೆ ಹೇಳಿದ ವ್ಯಕ್ತಿಗಳು ಒಟ್ಟಿಗೆ ಸಾಲ ಪಡೆದಿರುತ್ತಾರೆಯೇ ಎಂದರೆ?

ಉತ್ತರಃ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಹೀಗೆ ಮೂರು ಜನರಿಗೆ ಜಂಟಿಯಾಗಿ ಸಾಲ ಕೊಟ್ಟಿರುವ ಬಗ್ಗೆ ದೂರಿನಲ್ಲಿ ನಮೂದು ಮಾಡಿರುತ್ತೇವೆ, ನಾನು ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮೂವರು ಜಂಟಿಯಾಗಿ ಪಡೆದ ಸಾಲದ ಖಾತೆಯ ಸಂಖ್ಯೆ ನನಗೆ ನೆನಪಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ದೂರಿನಲ್ಲಿ ಸದರಿ ಸಾಲದ ಖಾತೆಯ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ಸದರಿ ಮೂವರಿಗೆ ಒಂದೇ ಖಾತೆ ಸಂಖ್ಯೆ ಮುಖಾಂತರ ಸಾಲ ಕೊಟ್ಟಿರುತ್ತೇನೆ. ಬೆಂಗಳೂರು ಸಹಕಾರಿ ಸೌಹಾರ್ದ ಸಂಘಗಳ ಉಪನಿಬಂಧಕರು ಕಾರ್ಯಾಲಯದಲ್ಲಿ ಈ ಮೇಲೆ ಹೇಳಿದ ಮೂರು ವ್ಯಕ್ತಿಗಳ ವಿರುದ್ಧ ಅರ್ಜಿ ಸಂ.**1734**ಃ**23-24** ನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ ವ್ಯಕ್ತಿಗಳ ವಿರುದ್ಧ ಪ್ರಸ್ತುತ ಪ್ರಕರಣವನ್ನು ಹಾಗೂ ಈ ಮೇಲೆ ಹೇಳಿದ ಅರ್ಜಿಯನ್ನು ಒಂದೇ ಸಾಲಕ್ಕೆ ಸಂಬಂಧಪಟ್ಟಂತೆ ಸಲ್ಲಿಸಿರುತ್ತೇವೆ ಎಂದರೆ ಸರಿ. ನಾನು ಪ್ರಸ್ತುತ ಪ್ರಕರಣದಲ್ಲಿ ಈ ಮೇಲೆ ಹೇಳಿದ ಅರ್ಜಿ ಸಂ.**734**ಃ**23-24** ನ್ನು ಸಲ್ಲಿಸಿದ ಬಗ್ಗೆ ದೂರಿನಲ್ಲಿ ನಮೂದು ಮಾಡಿರುತ್ತೇನೆ. ನಾನು ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಚೆಕ್ ನ್ನು ಆರೋಪಿಯೇ ಬರೆದುಕೊಟ್ಟಿರುತ್ತಾನೆ. ನಿಪಿ-1 ಚೆಕ್ ನಲ್ಲಿರುವ ಬರವಣಿಗೆಗೂ ಹಾಗೂ ನಿಪಿ-1(ಎ) ಸಹಿಯ ಬರವಣಿಗೆಯ ನಡುವೆ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಿಪಿ-1 ಚೆಕ್ ನ್ನು ಆರೋಪಿ ಕೊಟ್ಟಿರುತ್ತಾನೆ. ನಾವು ಜಮೇಲಾ ಬೇಗಾಂ ರವರಿಂದ ಯಾವುದೇ ಚೆಕ್ ಪಡೆದಿಲ್ಲ. ಈ ಮೂವರು

ವ್ಯಕ್ತಿಗಳಿಗೆ ಸಾಲ ಕೊಡುವ ಸಮಯದಲ್ಲಿ ಭದ್ರತೆಗೆಂದು ಜಮೇಲಾ ಬೇಗಾಂ ರವರಿಂದ ಅಡಮಾನ ಪತ್ರ ಪಡೆದಿರುತ್ತೇನೆ. ನಿಪಿ-1 ಚೆಕ್ ನಲ್ಲಿ ಬರೆಸಿರುವ ಅಂಕೆ ಸಂಖ್ಯೆ ತಪ್ಪು ಇದೆ ಎಂದರೆ ಸರಿಯಲ್ಲ. ಆರೋಪಿ ಕಡೆಯಿಂದ ಭದ್ರತೆಗಾಗಿ ನಿಪಿ-1 ಚೆಕ ನ್ನು ಈ ಮೂವರಿಗೆ ಸಾಲ ಕೊಡುವ ಸಮಯದಲ್ಲಿ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಜಮೇಲಾ ಬೇಗಾಂ ರವರಿಂದ ಅಡಮಾನ ಪತ್ರ ಪಡೆದಂತೆ ಸಾಲ ಕೊಡುವ ಸಮಯದಲ್ಲಿ ಆರೋಪಿ ಕಡೆಯಿಂದ ನಿಪಿ-1 ಚೆಕ್ ನ್ನು ಪಡೆದಿದ್ದೇವೆ ಎಂದರೆ ಸರಿಯಲ್ಲ. ಬೆಂಗಳೂರಿನಲ್ಲಿ ಸಲ್ಲಿಸಿದ ಅರ್ಜಿಯನ್ನು ರೂ.15,61,297-00 ಮೊತ್ತದ ಮರುಪಾವತಿ ಕೇಳಿರುತ್ತೇವೆ. ದಿಃ 27.01.2024 ರಲ್ಲಿ ಸದರಿ ಅರ್ಜಿಯನ್ನು ಬೆಂಗಳೂರಿನಲ್ಲಿ ಸಲ್ಲಿಸಲು ನಮ್ಮ ಸಂಘದಲ್ಲಿ ನಿರ್ಣಯ ಆಗಿತ್ತು ಎಂದರೆ ಸರಿ. ಸಾಲದ ಮರುಪಾವತಿಯನ್ನು ಸದರಿ ಮೂವರು ಮಾಡಿದ್ದರು ಸಹ ಅವರಲ್ಲಿ ಆರೋಪಿ ಭದ್ರತೆಗಾಗಿ ನೀಡಿದ ನಿಪಿ-1 ಚೆಕ್ ನ್ನು ದುರುಪಯೋಗ ಪಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ಹಾಗೂ ಸಾಲ ಪಡೆದ ಇನ್ನಿಬ್ಬರು ಇಲ್ಲಿಯವರೆಗೂ ಎಷ್ಟು ಸಾಲದ ಮರುಪಾವತಿ ಮಾಡಿರುತ್ತಾರೆ ಎಂಬುದನ್ನು ತೋರಿಸುವ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಖಾತಾ ವಿವರವನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿಯವರು ಸಾಲದ ಮರುಪಾವತಿ ಮಾಡಿದ್ದರೂ ಸಹ ಅವರಿಂದ ಹೆಚ್ಚಿನ ಹಣ ಪಡೆಯಲು ಈ ಪ್ರಕರಣವನ್ನು ಹಾಗೂ ಬೆಂಗಳೂರಿನಲ್ಲಿ ಇನ್ನೊಂದು ಅರ್ಜಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯು ಚೆಕ್ ಮೊತ್ತವನ್ನು ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಸಹಿ-

1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ವಿಜಯನಗರ ಜಿಲ್ಲೆ, ಹೊಸಪೇಟೆ.